ಬಿದರಕೆರೆ	–"–	6–08
ಅಣ್ಣಿಗನಹಳ್ಳಿ ಹೊನ್ನಮ್ಮನಹಳ್ಳಿ	–"–	5–39
ಕಂದಲಿ ಅಣಚಿಹಳ್ಳಿ	–"–	1–29
ಹಂದಿನಕೆರೆ	–"–	4–00
ಶಂಕರನಹಳ್ಳಿ	–"–	7–05
ಬಿಲಗುಂದ	–"–	4–29
ನಾರೀಹಳ್ಳಿ	–"–	4–09
ಗಾಡೇನಹಳ್ಳಿ	–"–	7–23
ವಿರೂಪನಹಳ್ಳಿ	–"–	2–07
ಹನುಮತಪುರ ಕಬ್ಬಿನಹಳ್ಳಿ	–"–	12–07
ಆಮೇನಹಳ್ಳಿ	–"–	3–17
ಛತ್ರನಹಳ್ಳಿ	–"–	1–08
ಕಾಮೇನಹಳ್ಳಿ	–"–	1–10

843(1040) ಶ್ರೀ· ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರವು ಇತ್ತೀಚೆಗೆ ಸಾರಾಯಿ ನಿಷೇಧ ಮಾಡಿದ್ದು, ಗೌರಿಬಿದನೂರು ತಾಲ್ಲೂಕಿನಲ್ಲಿ ಕೆಲವು ಅಕ್ರಮ ಸಾರಾಯಿ ದಾಸ್ತಾನು ಪ್ರಕರಣಗಳು ನಡೆದಿರುವ ಸಂಖ್ಯೆ ಎಷ್ಟು, ಅವು ಯಾವುದು;

ಆ) ಇಂತವರ ವಿರುದ್ಧ ಸರ್ಕಾರವು ಗೂಂಡಾ ಕಾಯ್ದೆ ಅನ್ವಯ ಎಷ್ಟು ಅಕ್ರಮ ದಾಸ್ತಾನುದಾರರ ಮೇಲೆ ಮೊಕದ್ದಮೆ ಹೂಡಲಾಗಿದೆ; (ವಿವರವಾರು ಒದಗಿಸುವುದು)

ಇ) ಕೆಲವು ಪ್ರಕರಣಗಳಲ್ಲಿ ಇಲಾಖಾ ಅಧಿಕಾರಿಗಳ ನಿರ್ಲಕ್ಷ್ಯತೆಯ ವರ್ತನೆಯಿಂದ ಅಪರಾಧಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಇಂತಹ ನಿರ್ಲಕ್ಷ್ಯ ಅಧಿಕಾರಿಯವರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ದಿನಾಂಕ: 1–07–2007 ರಿಂದ 18–07–2007ರವರೆಗೆ ಗೌರಿಬಿದನೂರು ತಾಲ್ಲೂಕಿನಲ್ಲಿ ಅಕ್ರಮ ಸಾರಾಯಿ ದಾಸ್ತಾನಿಗೆ ಸಂಬಂಧಿಸಿದಂತೆ ಅಬಕಾರಿ ಇಲಾಖೆಯಿಂದ ಮೊಕದ್ದಮೆಗಳು ಮತ್ತು ಪೋಲಿಸ್ ಇಲಾಖೆಯಿಂದ 3 ಮೊಕದ್ದಮೆಗಳು ದಾಖಲೆಯಾಗಿರುತ್ತವೆ. ವಿವರಗಳು ಈ ಕೆಳಕಂಡಂತೆ ಇವೆ.

ಅಬಕಾರಿ ಇಲಾಖೆ

ಪ್ರಮಾ.ವ ಸಂಖ್ಯೆ ಮತ್ತು ದಿನಾಂಕ	ಕೃತ್ಯ ನಡೆದ ಸ್ಥಳ	ಜಪ್ತು ಪ್ರಮಾಣ	ಆರೋಪಿಗಳ ವಿವರ
ಅಬಕಾರಿ ನಿರೀಕ್ಷಕರು 1/7–08 02–07–07	ಜಗರೆಡ್ಡಿ ಹಳ್ಳಿ	30 ಲೀ. ಸಾರಾಯಿ	ಪತ್ತೆಹಚ್ಚಬೇಕಾಗಿದೆ
ಅಬಕಾರಿ ಉಪ ನಿರೀಕ್ಷಕರು 1/07–08, 02–07–07	ಹೆಚ್. ನಾಗಸಂದ್ರ	22 ಲೀ. ಸಾರಾಯಿ	ಲಕ್ಷ್ಮಣರೆಡ್ಡಿ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ.
ಅಬಕಾರಿ ನಿರೀಕ್ಷಕರು 2/07–08, 05–07–07	ಹೆಚ್. ನಾಗಸಂದ್ರ	50 ಲೀ. ಸಾರಾಯಿ + 1 ಟಿವಿಎಸ್ ವಾಹನ	ಕಾಳಿ ಆಲಿಯಾಸ್ ಮೂರ್ತಿ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ.
ಅಬಕಾರಿ ನಿರೀಕ್ಷಕರು 3/07–08, 05–07–07	ಹೆಚ್. ನಾಗಸಂದ್ರ	250ಲೀ ಸಾರಾಯಿ	ಪತ್ತೆಹಚ್ಚಬೇಕಾಗಿದೆ.
ಅಬಕಾರಿ ಉಪ ನಿರೀಕ್ಷಕರು 3/07–08, 07–07–07	ಜಿ. ಬೊಮ್ಮಸಂದ್ರ	750 ಲೀ ಸಾರಾಯಿ	ಪತ್ತೆಹಚ್ಚಬೇಕಾಗಿದೆ.
ಅಬಕಾರಿ ನಿರೀಕ್ಷಕರು 3/07–08, 11–07–07	ಅಲಕಾಪುರ	1000ಲೀ. ಸಾರಾಯಿ	ಪತ್ತೆಹಚ್ಚಬೇಕಾಗಿದೆ.

ಪೋಲೀಸ್ ಇಲಾಖೆ

ಪಿ.ಎಸ್.ಐ. ಗೌರಿ ಬಿ ಗ್ರಾಮಾಂತರ 74/2007, 05–07–07	ಹೆಚ್. ನಾಗಸಂದ್ರ	1500 ಲೀ ಸಾರಾಯಿ	ಕರೇತಿಮ್ಮಯ್ಯ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ.
ಪಿ.ಎಸ್.ಐ. ಗೌರಿ ಬಿ ಗ್ರಾಮಾಂತರ 75/2007, 06–07–07	ಸಾಗಾನಹಳ್ಳಿ	900 ಲೀ ಸಾರಾಯಿ	ಕೃಷ್ಣಪ್ಪ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ.
ಪಿ.ಎಸ್.ಐ. ಮಂಚೇನಹಳ್ಳಿ, 83/2007, 06–07–07	ತರಿದಾಳು ಗ್ರಾಮ	20,800 ಲೀ. ಸಾರಾಯಿ	ಒರಗೂರು ಕಿಟ್ಟಿ ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿದೆ.

ಆ) ಗೌರಿಬಿದನೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಗೂಂಡಾ ಕಾಯ್ದೆಯಡಿಯಲ್ಲಿ ಯಾವುದೇ ಮೊಕದ್ದಮೆ ಇದುವರೆಗೆ ಹೂಡಿರುವುದಿಲ್ಲ.

ಇ) ದಿನಾಂಕ: 04–07–2007 ರಂದು ಗೌರಿಬಿದನೂರು ತಾಲ್ಲೂಕಿನ ಹೆಚ್.ನಾಗಸಂದ್ರ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ದಾಸ್ತಾನು ಮಾಡಿರುವ ಬಗ್ಗೆ ಬಂದ ಖಚಿತ ಬಾತ್ಮಿ ಮೇರೆಗೆ ತಹಶೀಲ್ದಾರ್ ಗೌರಿಬಿದನೂರು ತಾಲ್ಲೂಕು ಇವರು ಗೌರಿಬಿದನೂರು ವಲಯದ ಅಬಕಾರಿ ನಿರೀಕ್ಷಕರಿಗೆ ದೂರವಾಣಿ ಮುಖಾಂತರ ಮಾಹಿತಿ ತಿಳಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದ್ದರೂ, ವಲಯದ ಅಬಕಾರಿ ನಿರೀಕ್ಷಕರು ಈ ಕಾರ್ಯವನ್ನು ತಡವಾಗಿ ನಿರ್ವಹಿಸಿರುವ ಬಗ್ಗೆ ವರದಿ ಬಂದಿದ್ದು ದಿನಾಂಕ: 13–07–2007 ರಂದು ಸಂಬಂಧಿಸಿದ ವಲಯದ ಅಬಕಾರಿ ನಿರೀಕ್ಷಕರಿಗೆ ಕೋಲಾರ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ನೋಟೀಸು ನೀಡಿ ಈ ಬಗ್ಗೆ ವಿವರಣೆಯನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಈ) ಸಂಬಂಧಪಟ್ಟ ಅಬಕಾರಿ ನಿರೀಕ್ಷಕರಿಂದ ವಿವರಣೆ ಸ್ವೀಕೃತವಾದ ನಂತರ ಪರಿಶೀಲಿಸಿ ನಿಯಮಗಳ ಅನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

844(1304) ಶ್ರೀ ಶಿವಶಂಕರಪ್ಪ ಟಿ.ಹೆಚ್. (ತರೀಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.